# ಸಂಕ್ರಾಂತಿ ಮತ್ತು ಅಕ್ಕ ಸಮ್ಮೇಳನ ಶುಭಾರಂಭ

ಸಂಕ್ರಾಂತಿಯ ಆಗಮ, ಡ್ಯಾಲಸ್ ಕನ್ನಡಿಗರ ಸಂಭ್ರಮ

ಅಕ್ಕ ಸಮಿತಿಯ ಪರಿಶ್ರಮ, ಜೊತೆಗೂಡಲು ಅಪರೂಪದ ಸಂಗಮ

ಸಂಕ್ರಾಂತಿಯ ಆಚರಣೆ ಮಲ್ಲಿಗೆ ಕನ್ನಡ ಸಂಘಕ್ಕೆ ಹೊಸತು. ಹೋದ ವರ್ಷವಷ್ಟೇ ಸಮಿತಿಯವರು ಇದನ್ನು ಶುರು ಮಾಡಿದರು. ಈ ವರ್ಷದ ಆಚರಣೆಗೆ ಅಕ್ಕ ಸಮ್ಮೇಳನದ ಶುಭಾರಂಭ ಒಂದು ವಿಶಿಷ್ಟ ಕಳೆಯನ್ನು ನೀಡಿತ್ತು. ಸಮ್ಮೇಳನವು ಯಶಸ್ವಿಯಾಗಿ ಹಾಗೂ ನಿರ್ವಿಘ್ನವಾಗಿ ನೆರವೇರಲೆಂದು ಆಶಿಸುತ್ತಾ ಗಣೇಶನ ಅರ್ಚನೆಯಿಂದ ಕಾರ್ಯಕ್ರಮ ಶುರುವಾಯಿತು. ಸಿಹಿ ತಿಂದು ಶುಭ ಕೋರುತ್ತಾ ಮನೋರಂಜನಾ ಕಾರ್ಯಕ್ರಮಕ್ಕೆ ಎಲ್ಲರೂ ಸಜ್ಜಾದರು. ಸಹನಾ ರಾವ್ ಅವರ ಹೃತ್ಪೂರ್ವಕ ಸ್ವಾಗತದೊಂದಿಗೆ ಕಾರ್ಯಕ್ರಮ ಶುರುವಾಯಿತು.

ಮೊದಲಿಗೆ, ಅಣ್ಣ ತಂಗಿ ಜೋಡಿಯ ಮಧುರಮಯ ಸಂಗೀತ ಮನ ಮುದಗೊಳಿಸಿತು. ಆದಿತ್ಯ ಮೂರ್ತಿ, ಯು ಟಿ ಆಸ್ಟಿನ್ ಅಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಓದುತ್ತಿದ್ದಾನೆ, ತಂಗಿ ಅರ್ಚನಾ ಮೂರ್ತಿ ಫ್ಲವರ್ ಮೌಂಡ್ ಹೈ ಸ್ಕೂಲ್ ಅಲ್ಲಿ 12ನೇ ತರಗತಿಯಲ್ಲಿದ್ದಾಳೆ. ಇವರಿಗೆ ಪಕ್ಕವಾದ್ಯ ಮೃದಂಗದಲ್ಲಿ, ಯು ಟಿ ಡ್ಯಾಲಸ್ ವಿದ್ಯಾರ್ಥಿ ಅಮೇಯ್ ಬೆಳ್ಳಾರಿ ಸಹಯೋಗ ನೀಡಿದರು. ಗಜವದನಾ ಬೇಡುವೇ ಇಂದ ಶುರುವಾಗಿ, ಹಲವಾರು ದೇವರನಾಮ, ದಾಸರಪದಗಳನ್ನು ಅಚ್ಚುಕಟ್ಟಾಗಿ ಹಾಡಿದರು."ಇನ್ನೂ ದಯ ಬಾರದೆ" ಇನ್ನೂ ಎನ್ನ ಕಿವಿಯಲ್ಲಿ ಗುಂಜಿಸುತ್ತಿದೆ.

ಕಿವಿಯ ಇಂಪಿಂದ ಕಣ್ಣಿನ ತಂಪೆಡೆಗೆ ಕಾರ್ಯಕ್ರಮ ಮುಂದುವರೆಯಿತು. ವಾಶಿಂಗ್ಟನ್ ವಾಸಿಯಾದ ಕು. ಅನಘ ಶ್ರೀನಿವಾಸ್ರವರು ಡ್ಯಾಲಸ್ ಜನರನ್ನು ತಮ್ಮ ಅತ್ಯುತ್ತಮ ನೃತ್ಯ ಪ್ರದರ್ಶನದಲ್ಲಿ ಸೂರೆಗೊಂಡರು.

ಮೈಸೂರಿನ ಸ್ನೇಹಶ್ರೀ ನಿರ್ಮಲ್ ಕುಮಾರ್ ಅಮೆರಿಕ ಪ್ರವಾಸದಲ್ಲಿದ್ದಾರೆ ಹಾಗೂ ವಿಜಯೇಂದ್ರ ರಾವ್ ಯು ಟಿ ಡಲ್ಲಾಸ್‌ನಲ್ಲಿ ಉನ್ನತ ಪದವಿ ಪಡೆಯುತ್ತಿದ್ದಾರೆ. ಇವರಿಬ್ಬರ ಇಂಪಾದ ಸುಗಮ ಸಂಗೀತ ರಸಿಕರನ್ನು ವಿಹಾರ ಲೋಕಕ್ಕೆ ಕರೆದೊಯ್ಯಿತು. "ತೆರೆದಿದೆ ಮನೆ ಓ ಬಾ ಅತಿಥಿ", ಅಕ್ಕ ಉದ್ಘಾಟನೆಗೆ ಸುಸಮಯವಾಗಿತ್ತು.

ತೆರೆದಿದೆ ಮನೆ ಓ ಬಾ ಅತಿಥಿ

ತೆರೆದಿದೆ ಮನ ಓ ಬಾ ಅತಿಥಿ

ಡ್ಯಾಲಸ್ ನಗರದಿ ಇರುವ ಸಮ್ಮೇಳನಕೆ

ಹೊಸ ಜನರನು ತಾ ಅಕ್ಕ

ಮನರಂಜನೆಯ ನಂತರ ದಿನದ ಮುಖ್ಯ ಕಾರ್ಯಕ್ರಮದತ್ತಬಂಡಿ ಸಾಗಿತು. ಅಕ್ಕ ಸಮಿತಿಯ ಅಧ್ಯಕ್ಷರಾದ ಶಿವಮೂರ್ತಿ ಕೀಲಾರ ಅವರು 10ನೇ ಅಕ್ಕ ಸಮ್ಮೇಳನವು ದಲ್ಲಾಸ್‌ನಲ್ಲಿ ಆಗಸ್ಟ್ 31, ಸೆಪ್ಟೆಂಬರ್ 1 ಮತ್ತು 2 ರಂದು ನಡೆಯುವ ಸವಿ ಸುದ್ದಿಯನ್ನು ಪಸರಿಸಿದರು. ದೇಶದ ಎಲ್ಲೆಡೆಗಳಿಂದ ಬಂದಿದ್ದ ಅಕ್ಕ ಸಮಿತಿಯ ಸದಸ್ಯರು ಉದ್ಘಾಟನ ಸಮಾರಂಭದಲ್ಲಿ ಪಾಲ್ಗೊಂಡರು. ಮಲ್ಲಿಗೆ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀವತ್ಸ ರಾಮನಾಥನ್ ಹಾಗೂ ತಂಡದವರ ಅಕ್ಕ ಸಮ್ಮೇಳನದ ಹೃತ್ಪೂರ್ವಕ ಸ್ವಾಗತದೊಂದಿಗೆ ಕನ್ನಡ ಹಬ್ಬದ ಸಂಭ್ರಮ ಹೊಸ ನಿಲುವು ಕಂಡಿತು. ಹಲವಾರು ಸಮಿತಿಯ ಮುಖಂಡರು ಹಾಗೂ ಸದಸ್ಯರು ವೇದಿಕೆ ಮೇಲೆ ಒಗ್ಗೂಡಿದರು. ಅಕ್ಕ ಸಮ್ಮೇಳನಕ್ಕೆ ಡ್ಯಾಲಸ್ ಜನರ ಬೆಂಬಲ ಸ್ಪಷ್ಟವಾಗಿತ್ತು. ಎಲ್ಲರಲ್ಲೂ ಕನ್ನಡದ ಹಿರಿಮೆ ತುಳುಕುತಿತ್ತು.

ಅಕ್ಕ ಬಂತು ಟೆಕ್ಸಸ್ ಗೆ | ಬಂತು ಡ್ಯಾಲಸ್ ಗೆ

ಬಂತು ಶೆರಟನ್ ಗೆ | ಅಕ್ಕ ಬಂತು ||